# ನನ್ನೂರು ಶಿರೋಳ

**''ಇದು ನನ್ನ ಊರು, ಅದು ನಿನ್ನ ಊರು**
**ತಂತಮ್ಮ ಊರ, ತಮತಮಗೆ ಅಂದವ್ರೋಧೀರಾ''**

- ಬೇಂದ್ರೆವಾಣಿ

**ನ**ರಗುಂದ ತಾಲೂಕಿನ ಈಶಾನ್ಯಗಡಿಗೆ ಹೊಂದಿಕೊಂಡಿರುವ ಸುಮಾರು ೧೦,೦೦೦ ಜನಸಂಖ್ಯೆ ಹೊಂದಿರುವ ಗ್ರಾಮ ಶಿರೋಳ. ಅದು ನನ್ನ ಊರು. ಹತ್ತಿರದಲ್ಲಿಯೇ ಮಲಪ್ರಭೆ ಉತ್ತರದಿಕ್ಕಿಗೆ ಹರಿಯುತ್ತಿದ್ದಾಳೆ. ಈ ಊರ ಬಳಿಯಲ್ಲಿ ರೋಣ, ಬದಾಮಿ ಹಾಗೂ ನರಗುಂದ ತಾಲೂಕಿನ ಗಡಿಗಳ ತ್ರಿಸಂಗಮವಿದೆ.

ಸಿರಿಯಪೊಳಲ್-ಸಿರಿವೊಳಲ್-ಸಿರಿವೊಳಲು-ಸಿರೋಳ್-ಶಿರೋಳ್ ಎಂದು ಈ ಊರ ಹೆಸರಿನ ಶಬ್ದದ ನಿಷ್ಪತ್ತಿ. ಅದರ ಅರ್ಥ ಸಿರಿಯಗ್ರಾಮ : ''ಸಂಪತ್ತಿನ ಗ್ರಾಮ'' ಎಂದು. ಇದಕ್ಕೆ ಪೂರಕವಾಗಿ ಈ ಊರಿನ ಪಶ್ಚಿಮಕ್ಕೆ ಲಕ್ಷ್ಮಿಯ ಗುಡಿಯಿತ್ತೆಂದೂ ಆದರೀಗ ನಾಶವಾಗಿದೆಯೆಂದೂ ಹಿರಿಯರು ಹೇಳುತ್ತಾರೆ. ಅದಕ್ಕೆ ಅನತಿದೂರದಲ್ಲಿಯೇ ಈಗ ಹೊಸ ದೇವಾಲಯವೊಂದನ್ನು ನಿರ್ಮಿಸಿ ಅದಕ್ಕೆ ಶ್ರೀ ಜವಳಾಂಬಿಕಾ ದೇವಾಲಯವೆಂದು ಹೆಸರಿಟ್ಟಿದ್ದಾರೆ.

**ಐತಿಹಾಸಿಕ ಹಿನ್ನೆಲೆ :** ನನ್ನೂರಿಗೆ ತೀರ ಪ್ರಾಚೀನ ಇತಿಹಾಸವೇನೂ ಇಲ್ಲ. ಆದರೂ ಇಂದಿನ ಶ್ರೀ ಜಗದ್ಗುರು ತೋಂಟದಾರ್ಯ ಶಾಖಾಮಠದ ಆವರಣದಲ್ಲಿ ಒಂದು ವೀರಗಲ್ಲಿದೆ. ಅದರಲ್ಲಿ ಲಿಖಿತ ಅಂಶವೇನು ಉಳಿದಿರದಿದ್ದರೂ ಅದು ಈ ಗ್ರಾಮದ ಪ್ರಾಚೀನತೆಗೊಂದು ಸಾಕ್ಷಿ. ಆದರೆ ಇಷ್ಟಂತೂ ನಿಜ; ಈ ಗ್ರಾಮ ನರಗುಂದದ ಭಾವೆಮನೆತನದವರ ಕಾಲಕ್ಕಿಂತಲೂ ಹಿಂದಿನಿಂದ ಅಸ್ತಿತ್ವದಲ್ಲಿದ್ದಿತು. ಗ್ರಾಮದಲ್ಲಿರುವ ಸಿರಿಮಹಾಲಿಂಗೇಶ್ವರ ದೇವಸ್ಥಾನ ಮತ್ತು ಈಗಿನ ಹೆಣ್ಣುಮಕ್ಕಳ ಸರಕಾರಿ ಪ್ರಾಥಮಿಕ ಶಾಲೆಯ ಕಟ್ಟಡಗಳನ್ನು ನರಗುಂದ ಬಾಬಾ ಸಾಹೇಬನ ಕಾಲದಲ್ಲಿಯೇ ನಿರ್ಮಾಣಗೊಂಡವುಗಳೆಂದು ಹಿರಿಯರ ಹೇಳಿಕೆ. ಅಲ್ಲದೆ ಬಾಬಾ ಸಾಹೇಬನ ಮೇಲೆ ದಾಳಿ ಮಾಡಲು ಕಲಾದಗಿಯಿಂದ ಬಂದ ಆಂಗ್ಲರ ಸೈನ್ಯವು ಶಿರೋಳ ಮುಂದೆಯೇ ಮಲಪ್ರಭೆಯನ್ನು ದಾಟಿ ಕಪ್ಪಲಿಯ ಬಯಲು ಬಸವಣ್ಣನ ಗುಡಿ, ತೋಳನ ಹಳ್ಳಗಳ ಮೂಲಕ ನರಗುಂದಕ್ಕೆ ಹೋಯಿತೆಂದು ಹೇಳುತ್ತಾರೆ. ಆ ದಾರಿಯನ್ನು ಇಂದಿಗೂ ''ದಂಡಿನ ದಾರಿ'' ಎಂದು ಕರೆಯುತ್ತಾರೆ.

**ವ್ಯಾಪಾರ-ಕೈಗಾರಿಕೆ-ಉದ್ಯಮಗಳ :** ಶಿರೋಳ ಗೃಹಕೈಗಾರಿಕೆ ಪ್ರಾಧಾನವಾದ ಗ್ರಾಮ. ಮೊದಲಿನಿಂದಲೂ ನೇಕಾರಿಕೆ ಪ್ರಧಾನ ಉದ್ಯೋಗವಾಗಿರುವ ಗ್ರಾಮ. ಇಂದಿಗೂ ಇಲ್ಲಿನ ಜನ ಸಂಖ್ಯೆಯಲ್ಲಿ ೨೦ ಪ್ರತಿಶತ 'ಕರುಹಿನಸೆಟ್ಟಿ' ಸಮಾಜಕ್ಕೆ ಸೇರಿದ ನೇಕಾರರೇ ಇದ್ದಾರೆ. ಅಲ್ಲದೆ ದೇವಾಂಗದವರೂ ಇದ್ದಾರೆ. ಇವರ ಕಸುಬು ರೇಶಿಮೆ ಮತ್ತು ಬಾಂಬರಿನ ಕುಬುಸದ ಖಣಗಳನ್ನು ನೇಯುವದು. ಬಣ್ಣ-ಬಣ್ಣದ ನೂಲನ್ನು ಅಳವಡಿಸಿ ಚಿತ್ರ-ಚಿತ್ತಾರದ ಕುಬುಸದ ಖಣಗಳನ್ನು ನೇಯುವುದರಲ್ಲಿ ಇಲ್ಲಿಯ ನೇಕಾರರು ಸಿದ್ಧಹಸ್ತರು. ''ಗುಳೇದಗುಡ್ಡದ ಖಣ' ಎಂದು ಪ್ರಸಿದ್ದವಾಗಿರುವ ಕುಬಸದ ಖಣಗಳು ತಯಾರಾಗುತ್ತದ್ದದು ಶಿರೋಳದಲ್ಲಿಯೇ. ಇದಕ್ಕೆ ಕಾರಣ ಇಲ್ಲಿಯ ನೇಕಾರರಿಗೆ ಗುಳೇದಗುಡ್ಡದ ಮಾರವಾಡಿ ಸಾಹುಕಾರರು ಬಂಡವಲು ಪೂರೈಸಿ ಉತ್ಪಾದಿತ ಖಣಗಳನ್ನು ಖರೀದಿಸಿ ಮಾರಾಟಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಈ ಊರಿನಲ್ಲಿಯೂ ಹಿಂದೆ ಸಾಹಸಿ ವರ್ತಕರು ಮಹಾರಾಷ್ಟ್ರದ ''ಪುಣೆ''ಯಲ್ಲಿ, ಹುಬ್ಬಳ್ಳಿಯ ಜವಳಿ ಸಾಲಿನಲ್ಲಿ ಅಂಗಡಿಗಳನ್ನು ತೆರೆದು ಖಣದ ವ್ಯಾಪಾರ ಮಾಡುತ್ತಿದ್ದರು. ಈ ವ್ಯಾಪಾರ ಉಚ್ಛ್ರಾಯ ಸ್ಥಿತಿಯಲಿದ್ದು ಈ ಊರಲ್ಲಿ ಲಕ್ಷ್ಮಿ ವಾಸವಾಗಿದ್ದಳು. ಆದರೇನು ಮಾಡುವುದು? ಈಗ ವ್ಯಾಪಾರ ಬಿದ್ದು ಹೋಗಿ ನೇಕಾರರ ಕರಕುಶಲತೆಗೆ ಸಾಕ್ಷಿಯಾಗಿದ್ದ ಲಾಳಿ, ಮಗ್ಗದ ಹರಿಯಲ್ಲಿ ನಿಶ್ಚಲವಾಗಿ ನಿಂತಿದೆ. ಆದರೂ ಕರ್ನಾಟಕ ಖಾದಿ ಸಂಘ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಗಳು ಯಾಂತ್ರಿಕ ಮಗ್ಗಗಳನ್ನು ನಡೆಸಿ ಕೆಲವಾದರೂ ನೇಕಾರ ಕುಟುಂಬಗಳಿಗೆ ಆಸರೆಯಾಗಿ ನಿಂತಿವೆ. ಆದರೆ ಮೊದಲಿನ ಆ ಬಣ್ಣ-ಬಣ್ಣದ ನವಿಲಿನ ಮೈಬಣ್ಣವನ್ನು ಹೋಲುವ ಆ ಚಿತ್ರ-ಚಿತ್ತಾರದ ಕರಕುಶಲ ನೇಯ್ಗೆ ಈಗೆಲ್ಲಿ? ನೇಕಾರರಿಗೆ ಪೂರಕವಾದ ಮಗ್ಗದ ಹಣಿಗೆ ಮಾಡುವವರು, ನೂಲಿಗೆ ಬಣ್ಣ ಹಾಕುವವರು, ಮಗ್ಗದ ತಟ್ಟ ಕಟ್ಟುವವರು, ಕರಿದು, ನೀಲಿ, ಕೆಂಪು, ಹಳದಿ ಮುಂತಾದ ಬಗೆ ಬಗೆಯ ಬಣ್ಣಗಳನ್ನು ನೈಸರ್ಗಿಕ ಮೂಲಗಳಿಂದ ತಯಾರಿಸುವವರು. ಈಗ ನಿರ್ಗತಿರಾಗಿ ಆ ಕರಕುಶಲತೆಯನ್ನು ಕಳೆದುಕೊಂಡಿದ್ದಾರೆ. ನನ್ನ ಈ ಊರಿನಲ್ಲಿ ಪ್ರತಿ ರವಿವಾರ ಸಂತೆ ಸೇರುತ್ತದೆ. ಆ ಸಂತೆಗೆ ನೆರೆ-ಹೊರೆಯ ೧೫-೨೦ ಗ್ರಾಮಗಳಿಂದ ಜನರು ಕೊಡು-ಕೊಳ್ಳುವಿಕೆಗಾಗಿ ಬರುತ್ತಾರೆ.

ನನ್ನೂರು ಕೈಗಾರಿಕಾ ಪ್ರಧಾನ ಗ್ರಾವಾಗಿದ್ದರೂ, ಕೃಷಿ ಮತ್ತು ಹೈನುಗಾರಿಕೆಗೂ ಪ್ರಸಿದ್ಧವಾಗಿದೆ. ಮಲಾಪಹಾರಿ ನದಿಯ ತೀರದುದ್ದಕ್ಕೂ ತೆಂಗು, ಬಾಳೆಗಳ ತೋಟಗಾರಿಕೆಯಿದೆ. ಊರ ದಕ್ಷಿಣ ಭಾಗಕ್ಕೆ  ಕರಿ ಎರೆಭೂಮಿ ಫಲವತ್ತಾಗಿದ. ಈಗೀಗ ಮಲಪ್ರಭಾ ನೀರಾವರಿ ಯೋಜನೆಯಿಂದ ಕಾಲುವೆಯ ಮೂಲಕ ನೀರುಣಿಸಿ ಸೂರ್ಯಪಾನ, ಗೋವಿನ ಜೋಳಗಳನ್ನು ಬೆಳೆಯುತ್ತಿದ್ದಾರೆ. ಊರಲ್ಲಿ ನಾಲ್ಕಾರು ಅಡತಿ ಅಂಗಡಿಗಳಿವೆ; ಕೃಷಿ ಮಾರುಕಟ್ಟೆಯ ಶಾಖೆಯೂ ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

**ಆರ್ಥಿಕ ಮತ್ತು ವಾಣಿಜ್ಯ ಸಂಸ್ಥೆಗಳು :** ಶಿರೋಳದಲ್ಲಿ ಸರಕಾರಿ ಸ್ವಾಮ್ಯದ ವಿಜಯಾ ಬ್ಯಾಂಕು, ಕರ್ನಾಟಕ ಕೇಂದ್ರೀಯ ಸಹಕಾರೀ ಬ್ಯಾಂಕು, ದೊಡ್ಡಪತ್ತಿನ ಸಹಕಾರಿಬ್ಯಾಂಕುಗಳಲ್ಲದೆ, ನಾಲ್ಕಾರು ಫೈನಾನ್ಸ್ ಕಾರ್ಪೋರೇಶನ್‌ಗಳು ಕೆಲಸಮಾಡುತ್ತಿವೆ. ಈ ಆರ್ಥಿಕ ಸಂಸ್ಥೆಗಳು ವ್ಯಾಪಾರಸ್ಥರಿಗೆ, ಕೈಗಾರಿಕೆಗಳಿಗೆ, ರೈತರಿಗೆ ಸಾಲಸೌಲಭ್ಯಗಳನ್ನು ಒದಗಿಸುತ್ತಲಿವೆ.

**ಶಿಕ್ಷಣ ಸಂಸ್ಥೆಗಳು :** ನನ್ನೂರಲ್ಲಿ ಬಿ.ಎಂ.ಪಾಟೀಲ ಬಾಲಕರ ಮತ್ತು ಬಾಲಿಕೆಯರ ಪ್ರೌಢಶಾಲೆಗಳು, ಶ್ರೀ ಮಂಜುನಾಥ ಪ್ರೌಢಶಾಲೆ, ಶ್ರೀ ಗುರುಬಸವ ಪ್ರೌಢಶಾಲೆಗಳು ಮಕ್ಕಳಿಗೆ ಹೈಸ್ಕೂಲ್‌ಮಟ್ಟದ ಶಿಕ್ಷಣವನ್ನು ಒದಗಿಸುತ್ತಿವೆ. ಸರ್ವೋದಯ ಶಿಕ್ಷಣ ಸಮಿತಿಯ ಪದವಿಪೂರ್ವ ಕಾಲೇಜು ಕಲೆ, ವಾಣಿಜ್ಯ ವಿಷಯಗಳಲ್ಲಿ ಪಿ.ಯು.ಸಿ ಶಿಕ್ಷಣವನ್ನು ಒದಗಿಸುವುದಲ್ಲದೆ, ಅದೇ ಮಟ್ಟದಲ್ಲಿ ಜೆ.ಓ.ಡಿ.ಸಿ ಎಂಬ ಉದ್ಯೋಗ ಮೂಲ ಶಿಕ್ಷಣವನ್ನೂ ಒದಗಿಸುತ್ತಿದೆ. ತೋಂಟದಾರ್ಯ ಶಾಖಾ ಮಠದಲ್ಲಿ ಎರಡು ವರ್ಷಗಳ ಎಲೆಕ್ಟ್ರಿಕ್, ಟ್ರ್ಯಾಕ್ಟರ್ ಮೆಕ್ಯಾನಿಕ್‌ಗಳ ಐ.ಟಿ.ಐ. ಕೋರ್ಸುಗಳನ್ನು ಶ್ರೀ ಮಾದಾರಚೆನ್ನಯ್ಯ ಕೈಗಾರಿಕಾ ಸಂಸ್ಥೆ ಒದಗಿಸುತ್ತದೆ. ಗಂಡು ಮಕ್ಕಳ ಸರಕಾರಿ ಉನ್ನತ ಪ್ರಾಥಮಿಕ ಶಾಲೆ, ಹೆಣ್ಣು ಮಕ್ಕಳ ಸರಕಾರಿ ಉನ್ನತ ಪ್ರಾಥಮಿಕ ಶಾಲೆ, ಶ್ರೀ ಅಮರೇಶ್ವರ ಉನ್ನತ ಪ್ರಾಥಮಿಕ ಶಾಲೆ, ಶ್ರೀ ಸಿದ್ಧಲಿಂಗೇಶ್ವರ ಪ್ರಾಥಮಿಕ ಶಾಲೆ ಇವು ಪ್ರಾಥಮಿಕ ಮಟ್ಟದ ಶಿಕ್ಷಣವನ್ನು ಕೊಡುತ್ತಿವೆ. ಅಲ್ಲದೆ ನಮ್ಮ ಮುಸ್ಲಿಂಬಾಂಧವರ ಮಕ್ಕಳಿಗಾಗಿ ಒಂದು ಸರಕಾರಿ ಉರ್ದುಪ್ರಾಥಮಿಕ ಶಾಲೆಯೂ ಇದ್ದು ಅದು ಉರ್ದು ಮಾಧ್ಯಮದಲ್ಲಿ ಶಿಕ್ಷಣವನ್ನು ಒದಗಿಸುತ್ತಿದೆ. ಈಗೀಗ ಕೆಲ ನವಯುವಕರ ಪ್ರಯತ್ನದಿಂದ ಸ್ಥಾಪಿತಗೊಂಡ ''ಕ್ರಿಯೇಟಿವ್ ಅಸೋಸಿಯಶನ್'' ಎಂಬ ಸಂಸ್ಥೆ, ನವೋದಯಶಾಲೆ, ಸೈನಿಕಶಾಲೆ ಹಾಗೂ ಇತರ ವಸತಿ ಶಾಲೆಗಳಿಗೆ ಪ್ರವೇಶಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ತರಬೇತಿ ಶಾಲೆಯನ್ನು ನಡೆಸುತ್ತಿದೆ.

**ಧಾರ್ಮಿಕ ಕೇಂದ್ರಗಳು ಮತ್ತು ಚಟುವಟಿಕೆಗಳು :** ವಾಣಿಜ್ಯ-ವ್ಯಾಪಾರಗಳ ಲೌಕಿಕ ಚಟುವಟಿಕೆಗಳಿಗೆ ಪ್ರಾಧಾನ್ಯತೆ ಕೊಟ್ಟಂತೆಯೇ ಶಿರೋಳದ ಜನತೆ-ಧಾರ್ಮಿಕ ಚಟುವಟಿಕೆಗಳಿಗೂ ಪ್ರಾಧಾನ್ಯತೆ ಕೊಟ್ಟಿದೆ. ಹೊಳೆ ಆಲೂರಿನ ಅವಧೂತರಾದ ಶ್ರೀ ಎಚ್ಚರ ಸ್ವಾಮಿಗಳು ಶಿರೋಳಕ್ಕೆ ಬಂದಾಗ ತಪೋನಿರತರಾಗುತ್ತಿದ್ದ ಗವಿಯೊಂದು ಎಚ್ಚರಸ್ವಾಮಿ ಮಠವೆಂದು ಪ್ರಸಿದ್ಧವಾಗಿದೆ. ಈ ಮಠ ಒಂದು ನೈಸರ್ಗಿಕ ಗವಿ. ನೆಲಮಟ್ಟದಿಂದ ೮-೧೦ ಅಡಿ ಆಳದಲ್ಲಿ ಅದಲ್ಲಿ ಕೇವಲ ಇಬ್ಬರು ಮಾತ್ರ ಕುಳಿತುಕೊಳ್ಳಲು ಅನುಕೂಲವಾಗಿರುವ ಚೌಕಾಕಾರದ ಈ ಗವಿ ಸಾಧಕರಿಗೆ ಏಕಾಂತವನ್ನೊದಗಿಸುವ ಒಂದು ಧ್ಯಾನ ಮಂದಿರ. ಇದರಲ್ಲಿ ಶ್ರೀ ಎಚ್ಚರೇಶ್ವರರು ತಮ್ಮ ಆರಾಧನೆಗೆ ಬಳಸುತ್ತಿದ್ದರೆಂದು ಹೇಳಲಾಗುವ ಶ್ರೀ ವೀರಭದ್ರಸ್ವಾಮಿ ಮೂರ್ತಿ, ಒಂದು ತಾಮ್ರದ ಕೈಗೊಡಲಿ, ಕಟ್ಟಿಗೆ ಬೆತ್ತಗಳನ್ನು ಇಲ್ಲಿ ಒಂದು ಗದ್ದಿಗೆಯ ಮೇಲಿಟ್ಟು ಪೂಜಿಸುತ್ತಾರೆ. ಇದರ ಸುತ್ತಲೂ ಕರಿಕಲ್ಲಿನ ಗೋಡೆಯಿದೆ. ಇದರ ಆವಾರದಲ್ಲಿಯೇ ಬಿ. ಎಂ. ಪಾಟೀಲ ಬಾಲಕ-ಬಾಲಕಿಯರ ಪ್ರೌಢಶಾಲೆಗಳು ಮತ್ತು ಸರ್ವೋದಯ ಶಿಕ್ಷಣ ಸಂಸ್ಥೆಯ ಪದವಿಪೂರ್ವಕಾಲೇಜುಗಳು ನಡೆಯುತ್ತವೆ. ಪ್ರತಿ ವರ್ಷ ವಿಜಯದಶಮಿಯಂದು ಶ್ರೀ ಎಚ್ಚರೇಶ್ವರ ಸ್ವಾಮಿಯ ರಥೋತ್ಸವ ಜರುಗಿದ ಮೇಲೆಯೇ ಇಲ್ಲಿ ಸೀಮೋಲ್ಲಂಘನ ಮತ್ತು ಬನ್ನಿಮುಡಿಯುವ ಕಾರ್ಯಕ್ರಮ ನಡೆಯುತ್ತದೆ. ಇಲ್ಲಿಂದ ಅನತಿ ದೂರದಲ್ಲಿಯೇ ಶ್ರೀ ರುದ್ರಪ್ಪಜ್ಜನವರೆಂಬ ಶರಣರ ಚಿಕ್ಕ ಮಠವಿದೆ.

ಊರಿನ ಪೂರ್ವಕ್ಕೆ ಶ್ರೀ ಎಚ್ಚರ ಸ್ವಾಮಿಗಳ ಮಠವಿದ್ದರೆ, ಪಶ್ಚಿಮಕ್ಕೆ ಶ್ರೀ ತೋಂಟದ ಸಿದ್ಧಲಿಂಗ ಶಾಖಾಮಠವಿದೆ. ಈ ಶಾಖಾಮಠದ ಪ್ರಧಾನ ಭಾಗವನ್ನು ಸಂಪೂರ್ಣ ಕಲ್ಲಿನಿಂದಲೇ ಕಟ್ಟಿರುವುದರಿಂದ ಇದನ್ನು 'ಕಲ್ಮಠ'ವೆಂದೂ ಕರೆಯುತ್ತಾರೆ. ಪ್ರತಿವರ್ಷ ಪುಷ್ಯ ಮಾಸದ ಕೃಷ್ಣಪಕ್ಷದ ಪಂಚಮಿಯಿಂದ ಮೂರು ದಿನಗಳವರೆಗೆ ಈ ಮಠದ ಜಾತ್ರೆ ನಡೆಯುತ್ತದೆ. ಈ ಜಾತ್ರೆಯ ರಥೋತ್ಸವ ಮತ್ತು ರೊಟ್ಟಿಪ್ರಸ್ತ ಈ ಭಾಗದಲ್ಲಿ ಅತ್ಯಂತ ಪ್ರಸಿದ್ಧವಾಗಿವೆ. ಜಾತ್ರೆಯ ಅಂಗವಾಗಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಠದಲ್ಲಿ ನಡೆಸಲಾಗುತ್ತಿದೆ. ಊರಲ್ಲಿಯೂ ಅನೇಕ ಹವ್ಯಾಸಿ ನಾಟಕ ಕಂಪನಿಗಳು ನಾಟಕಗಳನ್ನಾಡಿಸುತ್ತಾರೆ. ಈ ಮಠದ ಆವರಣದಲ್ಲಿ ಹಿಂದಿನ ಶ್ರೀಗಳಾದ ಪ.ಪೂ. ಅನ್ನದಾನೇಶ್ವರರು, ಪ.ಪೂ.ಸದಾಶಿವರು, ಹಾಗೂ ಪ.ಪೂ.ಗುರುಬಸವ ಸ್ವಾಮಿಗಳವರ ಗದ್ದುಗೆಗಳಿವೆ. ಈ ಮಹಾಮಹಿಮರ ತ್ಯಾಗ ತಪಸ್ಸಿನ ಫಲವಾಗಿ ಮಠ ಅಭಿವೃದ್ಧಿಗೊಂಡಿದೆ. ಈಗಿನ ಶ್ರೀಗಳಾದ ಪ.ಪೂ. ಗುರುಬಸವ ಸ್ವಾಮಿಗಳು, ಗದುಗಿನ ತೋಂಟದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶ್ರೀಮಠದ ಏಳಿಗೆಗೆ ಶ್ರಮಿಸುತ್ತಿದ್ದಾರೆ. ಶ್ರೀಮಠದ ಅವರಣದಲ್ಲಿ ಶ್ರೀ ಗುರುಬಸವ ಪ್ರೌಢಶಾಲೆ ಮತ್ತು ಶ್ರೀ ಮಾದಾರ ಚೆನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆಗಳು ನಡೆಯುತ್ತಿವೆ.

ಊರ ಮಧ್ಯಭಾಗದಲ್ಲಿ ಗ್ರಾಮದ ಹಿರೇಮಠವಿದೆ. ಈ ಮಠದ ಹಿರಿಯರು ಹಿಂದಿನಿಂದ ಊರ ಧಾರ್ಮಿಕ ಚಟುವಟಿಕೆಗಳಿಗೆ ಬೆನ್ನೆಲುಬಾಗಿದ್ದಾರೆ. ಶ್ರೀ ರೇವಣ್ಣಸಿದ್ಧಯ್ಯ ಶಾಸ್ತ್ರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನವನ್ನು ಸ್ಥಾಪಿಸಿ ಪ್ರತಿವರ್ಷ ದವನದ ಹುಣ್ಣಿಮೆಯಂದು ರಥೋತ್ಸವ ಜರುಗಿಸುತ್ತಿದ್ದಾರೆ. ಊರಿನ ಪ್ರತಿಯೊಂದು ಓಣಿಗೂ ಒಂದಾದರೂ ದೇವಸ್ಥಾನವಿದ್ದೇ ಇದೆ. ಶ್ರೀ ಮರಡಿ ಮಾರುತಿ ದೇವಸ್ಥಾನ, ಶ್ರೀ ಸಿರಿಮಾಲಿಂಗೇಶ್ವರ ದೇವಸ್ಥಾನ, ಶ್ರೀ ಕಲ್ಮೇಶ್ವರ ದೇವಸ್ಥಾನಗಳು ಪ್ರಮುಖವಾಗಿವೆ. ಪ್ರತಿವರ್ಷ ಶ್ರಾವಣಮಾಸದಲ್ಲಿ ಅನೇಕ ಭಜನಾಮಂಡಳಿಗಳು ದೇವನಾಮ ಸಂಕೀರ್ತನ ಮಾಡುತ್ತ ಬೆಳಗು ಮುಂಜಾನೆ ನಗರ ಸಂಕೀರ್ತನೆ ನಡೆಸಿ ಶ್ರಾವಣವನ್ನು 'ಶ್ರವಣ'ವನ್ನಾಗಿಸುತ್ತಿವೆ.

ಶ್ರೀ ದುರ್ಗಾದೇವಿ ಮಂದಿರ ಹಾಗೂ ಮೊಹರಂದಲ್ಲಿ ಮುಸ್ಲಿಂರ 'ಪಂಜಾ'ಕೂಡಿಸುವ ಮಸೀದಿ ಇವೆರಡೂ ಈ ಊರಲ್ಲಿ ಒಂದಕ್ಕೊಂದು ತಗಲಿಕೋಡು ಹಿಂದೂ ಮುಸ್ಲಿಂರ ಭಾವೈಕ್ಯಕ್ಕೆ ಒಂದು ಸಂಕೇತವಾಗಿದೆ. ಹಿಂದೂಗಳ ಹೋಳಿಹಬ್ಬ ಮುಸ್ಲಿಂರ ಮೊಹರಂ ಇವೆರಡನ್ನೂ ಹಿಂದು ಮುಸ್ಲಿಂರಿಬ್ಬರೂ ಕೂಡಿಯೇ ಆಚರಿಸತ್ತಾರೆ. ಹಿಂದೂ ಮುಸ್ಲಿಂ ಇಬ್ಬರ ಸಹಕಾರದಿಂದಲೇ ಇಲ್ಲಿ ಮಸೀದಿ ನಿರ್ಮಿಸಲಾಗಿದೆ. ಮುಸ್ಲಿಂ ಮುಖಂಡರು ಮಠದ ಜಾತ್ರೆಯಲ್ಲಿ ಭಾಗವಹಿಸಿದರೆ, ಹಿಂದೂ ಮುಖಂಡರು ಮಸೀದಿಯ ಕಾರ್ಯಕ್ರಗಳಲ್ಲೂ ಭಾಗವಹಿಸುತ್ತಾರೆ.

ಶಿರೋಳದ ನೆರೆಯಲ್ಲಿ ಸರಿಯಾಗಿ ಎರಡು ಕಿಲೋಮೀಟರ್ ಪಶ್ಚಿಮಕ್ಕೆ 'ಕಲ್ಲಾಪುರ'ವೆಂಬ ಪುಟ್ಟ ಹಳ್ಳಿಯಿದೆ. ಇಲ್ಲಿ ಶ್ರೀ ಬಸವಣ್ಣನ ದೇವಾಲಯವಿದೆ. ಈ ಕಲ್ಲಾಪುರ ಬಸವಣ್ಣ ಕಾರಣಿಕ ದೇವರೆಂದು ಈ ಭಾಗದಲ್ಲಿ ಪ್ರಸಿದ್ಧಿಯಿದೆ. ಪ್ರತಿವರ್ಷ ಶ್ರಾವಣಮಾಸದ ಕೊನೆಯ ಸೋಮವಾರದಂದು ಇಲ್ಲಿ ರಥೋತ್ಸವ ಜರುಗುತ್ತದೆ. ಈ ಜಾತ್ರೆಗೆ ದೂರ-ದೂರದ ಊರುಗಳಿಂದ ಭಕ್ತರು ಆಗಮಿಸುತ್ತಾರೆ. ತಮ್ಮ-ತಮ್ಮ ಎತ್ತುಗಳನ್ನು ಜಾತ್ರೆಗೆ ತೆಗೆದುಕೊಂಡು ಬಂದು ಬಸವಣ್ಣನ ಗುಡಿಗೆ ಪ್ರದಕ್ಷಿಣೆ ಹಾಕಿಸುವುದರಿಂದ ಅವುಗಳಿಗೆ ರೋಗ-ರುಜಿನಾದಿಗಳ ಭಯವಿಲ್ಲವೆಂಬ ನಂಬಿಕೆ ಈ ಭಾಗದ ಜನರಲ್ಲಿದೆ. ಆದುದರಿಂದ ಕಲ್ಲಾಪೂರ ಬಸವಣ್ಣನ ಜಾತ್ರೆ 'ಜನಜಾತ್ರೆ'ಯಾಗಿದ್ದಂತೆ 'ದನಜಾತ್ರೆ'ಯೂ ಆಗಿದೆ. ಕಲ್ಲಾಪೂರ ಬಸವಣ್ಣ 'ಸ್ವಯಂಭೂ' ಎಂಬ ಪ್ರತೀತಿಯಿದೆ. ಶಿರೋಳದ ರಥೋತ್ಸವ ಮುನ್ನಾಗುವುದು ಈ ಕಲ್ಲಾಪೂರದಿಂದ ನಂದೀ ಕೋಲುಗಳು ಬಂದ ಮೇಲೆಯೇ. ಎತ್ತರವಾದ, ನೇರವಾದ ಗಟ್ಟಿ ಬಿದುರುಗಳ ಚೂಪಾದ ತುದಿಗಳನ್ನು ಎತ್ತುಗಳ ಕೋಡುಗಳಿಗೆ ಹಾಕುವ 'ಕೊಂಬಣಸು' ಹಾಗು ಇತರ ಆಭರಣಗಳಿಂದ ಅಲಂಕರಿಸಿರುತ್ತಾರೆ. ಆ ಎರಡೂ ಕೋಲುಗಳನ್ನು ಇಬ್ಬರು ಗಟ್ಟಿಯಾಳುಗಳು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಸಮಭಾರ ನಿರ್ವಹಿಸುತ್ತಾ ರಥೋತ್ಸವದ ಅಗ್ರಭಾಗದಲ್ಲಿ ಇಬ್ಬರೂ ಎರಡೂ ಕೋಡುಗಳನ್ನು ಪ್ರತಿನಿಧಿಸುವಂತೆ ಸಾಗುವದು ಸಾಮಾನ್ಯ ಮಾತಲ್ಲ!

**ನನ್ನೂರ ಜನರ ರಸಿಕತೆ ಮತ್ತು ಕಲಾಪ್ರೇಮ** : ನನ್ನೂರ ಜನರು ರಸಿಕರು. ಕಲಾಪ್ರಿಯರು, ಕಲಾವಂತರು. ನನ್ನೂರಿನ ಜನರ ಭೋಜನ ರಸಿಕತೆಯನ್ನು ತೋರಿಸುವ ಕೆಲವು ಹಬ್ಬಗಳಿವೆ. ನನ್ನೂರಿನಲ್ಲಿ ಎಳ್ಳಅಮವಾಸ್ಯೆಯಂದು ಹೊಲಕ್ಕೆ ಚರಗ ಚಲ್ಲುವ ವೈಭವವನ್ನು ನೋಡಬೇಕು: ಎಳ್ಳಹೋಳಗೆ, ಕರ್ಚಿಕಾಯಿ, ಸೆಜ್ಜಕಾಯಿ, ಜೋಳದರೊಟ್ಟಿ, ಬದನೆಕಾಯಿಯ ಪಲ್ಲೆ, ಗುರೆಳ್ಳು, ಪುರಾಣಿ, ಸೇಂಗಾದ ಚಟ್ನಿಪುಡಿಗಳು, ಹೆಸರು-ಅಲಸಂದೆ ಕಾಳುಗಳ ಪಲ್ಲೆಗಳು ಹೆಡಿಗೆಗಳಲ್ಲಿ ತುಂಬಿಕೊಂಡು, ಚಕ್ಕಡಿಗಳಲ್ಲಿ ಹೇರಿಕೊಂಡು, ಸಿಂಗರಿಸಿದ ಹೋರಿಗಳನ್ನು ಹೂಡಿಕೊಂಡು ಬಿಳಿ ಜೋಳದ ಹೊಲಗಳಿಗೆ, ಬಿಳಿ ಜೋಳದ ಬೆಳೆಯಿಂದ ಅಲಂಕೃತಗೊಂಡ ಭೂತಾಯಿಯ ಆರಾಧನೆಗೆಂದು ಹೊರಟ ಸ್ತ್ರೀಪುರುಷರ ವೈಭವವನ್ನು ನೋಡಬೇಕು !

ಹೊಲದಲ್ಲಿ ಭೂತಾಯಿಯನ್ನು ಪೂಜಿಸಿ ನಾನಾವಿಧ ಭಕ್ಷ್ಯಭೋಜ್ಯಗಳನ್ನು ಪ್ರಕೃತಿ ಸನ್ನಿಧಾನದಲ್ಲಿ ಸವಿಯುವ ನಮ್ಮವರ ರಸಿಕತೆ ಎಂಥದು ! ಇದರಂತೆಯೇ ಇನ್ನೊಂದು ನಮ್ಮಲ್ಲಿಂದು ವಿಶೇಷ ಹಬ್ಬ ಮಕರ-ಸಂಕ್ರಾಂತಿ. ಎಳ್ಳ ಅಮವಾಸ್ಯೆಯ ಊಟ ಹೊಲದಲ್ಲಾದರೆ, ಸಂಕ್ರಾಂತಿಯೂಟ ನದೀತೀರದಲ್ಲಿ. ಆದರೆ ರುಚಿ ವೈವಿಧ್ಯ ಮಾತ್ರ ಅದರದೆ. ನಮ್ಮೂರ ಜಾತ್ರೆಯಲ್ಲಿಯ ರೊಟ್ಟಿ ಪ್ರಸ್ತದಲ್ಲಿಯ ಕುರು ಕುರು ರೊಟ್ಟಿ ಬಿಳಿ ಜೋಳದ ಬಾನ, ಕರಿಂಡಿಯ ಸವಿಯನ್ನು ಒಮ್ಮೆ ಸವಿದವನು ತನ್ನ ಜೀವನದಲ್ಲಿ ಎಂದಿಗೂ ಅದರ ಸವಿಯನ್ನು ಮರೆಯಲಾರ.

ನನ್ನೂರ ಜನರು ಕಲಾಪ್ರೇಮಿಗಳು. ಎಷ್ಟೋ ಸಲ ಬೇರೆಡೆ ದಿವಾಳಿಯೆದ್ದು ಬಂದ ಬಡ ನಾಟಕ ಕಂಪನಿಗಳಿಗೆ ತಮ್ಮ ನಾಟ್ಯಪರಿಕರಗಳನ್ನು ಪುಕ್ಕಟೆಯಾಗಿ ಕೊಟ್ಟ, ಟಿಕೇಟು ಮಾರಾಟ ಮಾಡಿಸಿ, ಆವರನ್ನು ಸಹೃದಯತೆಯಿಂದ ಬೀಳ್ಕೊಟ್ಟ ಪ್ರಸಂಗಗಳೂ ಸಾಕಷ್ಟಿವೆ. ಈ ಜನ ಕಲಾಪ್ರಿಯರಾಗಿದ್ದಂತೆ ಕಲಾವಿದರು ಹೌದು: ಊರಲ್ಲಿ ಓಣಿಯೊಂದರಂತೆ ಹವ್ಯಾಸಿ ನಾಟಕ ಮಂಡಳಿಗಳಿವೆ. ಶ್ರೀ ಮರಡಿ ಮಾರುತಿ ನಾಟಕ ಸಂಘ, ಶ್ರೀ ದುರ್ಗಾದೇವಿ ನಾಟ್ಯ ಸಂಘ, ಸಿರಿ ಮಹಾಲಿಂಗೇಶ್ವರ ನಾಟ್ಯ ಸಂಘ, ಜೈಜವಾನ್ ನಾಟ್ಯ ಸಂಘ ಇವು ಪ್ರಮುಖವಾದವುಗಳು. ಈ ನಾಟ್ಯ ಸಂಘಗಳು ತಮ್ಮ ನಾಟ್ಯ ಪರಿಕರಗಳನ್ನು ಹೊಂದಿರುವದಲ್ಲದೆ ನಾಟಕಕ್ಕೆ ಬೇಕಾಗುವ ವಾದ್ಯ-ವಾದನಗಾರರನ್ನೂ ಹೊಂದಿವೆ. ಜಾತ್ರೆಗಳ ಸಂದರ್ಭದಲ್ಲಿ ಊರಲ್ಲಿ ನಾಟಕಗಳ ಮೇಲಾಟವೇ ಎದ್ದಂತಿರುತ್ತದೆ.

ಊರು ಕಿರಿದೋ, ಹಿರಿದೋ ಎನ್ನುವುದಕ್ಕಿಂತ ಅದರಲ್ಲಿಯ ಜನರ ಬದುಕು, ಆ ಬದುಕಿನ ಬಗೆಗೆ ಅವರಲ್ಲಿರುವ ಆಸಕ್ತಿ ಹಿರಿದಾಗಿರುವುದು ಅವಶ್ಯ. ಅಂತಹ ಹಿರಿ ಬದುಕನ್ನು ಬದುಕುತ್ತಿರುವ, ಆ ಬದುಕನ್ನು ಹಿರಿದಾಗಿ ಪ್ರೀತಿಸುವ ನನ್ನೂರ ಜನ ಅಭಿನಂದನಾರ್ಹರು.